# ಒಂದು ಕಾಲಾತೀತವಾದ ಪ್ರೇಮ ಪತ್ರ

ಪುರಾಣದ ಕಥೆಯಲ್ಲಿ ವಿದರ್ಭದ ರಾಜನಾದ ಭೀಷ್ಮಕನ ಪುತ್ರಿಯಾದ ರುಕ್ಮಿಣಿಯನ್ನು ಆಕೆಯು ದೇವಸ್ಥಾನಕ್ಕೆ ಹೋದಾಗ ಕೃಷ್ಣನು ಎತ್ತುಕೊಂಡು ಹೋದದ್ದನ್ನು ನೋಡಿದ್ದೇವೆ.

ಇಲ್ಲಿ ಆಸಕ್ತಕರವಾದ ವಿಷಯವೆಂದರೆ ರುಕ್ಮಿಣಿಯು ಮುಂದಿಟ್ಟ ಮದುವೆಯ ಪ್ರಸ್ತಾವನೆ. ಆಕೆಯ ಕುಟುಂಬವು ಎರಡು ರಾಜ್ಯಗಳ ನಡುವೆ ಸಂಬಂಧವನ್ನು ಬೆಸೆಯುವ ಸಲುವಾಗಿ ಓರ್ವ ಅಸಹನೀಯವಾದ ರಾಜನೊಡನೆ ತನ್ನ ಮದುವೆಯನ್ನು ನಿಶ್ಚಯಿಸಿರುವುದಾಗಿ ತಿಳಿದ ರುಕ್ಮಿಣಿಯು ಒಂದು ಪತ್ರವನ್ನು ಕೃಷ್ಣನಿಗೆ ಬರೆದು, ತನ್ನನ್ನು ಸ್ವೀಕರಿಸಿ, ತನ್ನನ್ನು ಹೊತ್ತುಕೊಂಡು ಹೋಗಬೇಕೆಂದು ವಿನಂತಿಸಿದಳು.

ಆಕೆಯ ಅಣ್ಣ ಆಯೋಜಿಸಿದ್ದ ಮದುವೆಯ ಮೊದಲು, ಆಕೆ ದೇವಿಯ ದೇವಸ್ಥಾನಕ್ಕೆ ಭೇಟಿ ನೀಡುವಳೆಂದೂ, ಆಗ ತನ್ನ ಜನರಿಗೆ ಹಾನಿ ಮಾಡದೆಯೆ ಆಕೆಯನ್ನು ಹೊತ್ತುಕೊಂಡು ಹೋಗಬೇಕೆಂಬ ಯೋಜನೆಯನ್ನು ಆ ಪತ್ರದಲ್ಲಿ ಬರೆದಿದ್ದಳು. ಈ ರೀತಿಯಾಗಿ ನಡೆಯದಿದ್ದರೆ ತನ್ನ ಪ್ರಾಣವನ್ನು ತೆಗೆದುಕೊಳ್ಳುವುದಾಗಿ ಬೆದರಿಕೆಯನ್ನು ಒಡ್ಡಿದಳು.

ಯೋಜನೆಯಂತೆಯೇ ಕೃಷ್ಣನು ತನ್ನ ಸೇನೆಯೊಡನೆ ಬಂದು, ಸಮಯಕ್ಕೆ ಸರಿಯಾಗಿ ರುಕ್ಮಿಣಿಯನ್ನು ಒತ್ತಾಯದ ಮದುವೆಯಿಂದ ರಕ್ಷಿಸಿ, ಆಕೆಯನ್ನು ದ್ವಾರಕೆಗೆ ಹೊತ್ತುಕೊಂಡು ಹೋಗಿ, ಅತೀ ವೈಭವದಿಂದ ಆಕೆಯನ್ನು ಮದುವೆಯಾದನು. ರುಕ್ಮಿಣಿಯು ಕೃಷ್ಣನ ಮೊದಲನೆಯ ಮತ್ತು ಅತೀ ಪ್ರಸಿದ್ಧಳಾದ ಮಹಾರಾಣಿಯಾದಳು.

ತನ್ನನ್ನು ವರಿಸುವಂತೆ ರುಕ್ಮಿಣಿಯೇ ಮೊದಲು ಕೃಷ್ಣನನ್ನು ವಿನಂತಿಸಿದಳು ಎಂಬುದು ಇಲ್ಲಿ ಗಮನಿಸಬೇಕಾದದ್ದು. ಪತ್ರದ ವಿಷಯವನ್ನು ಭಾಗವತ ಪುರಾಣದಲ್ಲಿ ವಿವರಿಸಲಾಗಿದೆ. ಈ ಪತ್ರವು ಬಹುಶಃ ಇತಿಹಾಸದಲ್ಲೇ ದಾಖಲಾದ ಮೊದಲ ಪ್ರೇಮಪತ್ರ. ಇಲ್ಲಿ ರುಕ್ಮಿಣಿಯು ಕೃಷ್ಣನನ್ನು ಭುವನ ಸುಂದರ ಎಂದರೆ, “ಜಗತ್ತಿನಲ್ಲೇ ಅತೀ ಸುಂದರನಾದ ವ್ಯಕ್ತಿ” ಎಂದು ಕರೆಯುತ್ತಾಳೆ.



ಕೃಷ್ಣ–ರುಕ್ಮಿಣಿಯರ ಕಥೆಯು ಭಾರತದ ಕಾಲಾತೀತವಾದ ಪ್ರೇಮದ ಕಥೆಗಳಲ್ಲಿ ಒಂದು ಮತ್ತು ಪ್ರತಿಯೊಂದು ಕೇಳುಗರ ಮನಸ್ಸನ್ನೂ ಸೂರೆಗೊಳಿಸುತ್ತದೆ ಮತ್ತು 5100 ವರ್ಷಗಳ ನಂತರವೂ ಸಹ ತಾನು ರುಕ್ಮಿಣಿಯಾಗಬಾರದಿತ್ತೆ ಎಂದು ಅನೇಕ ಕನ್ಯೆಯರು ಆಶಿಸುವಂತೆ ಮಾಡುತ್ತದೆ.

**ರುಕ್ಮಿಣಿ–ಕೃಷ್ಣ, ತಂಜಾವೂರು ಕಲಾಚಿತ್ರ**



**ಭುವನ ಸುಂದರ**

ಓ ಮುಕುಂದ,
ನಿನ್ನ ಕುಲದಲ್ಲಿ, ಗುಣದಲ್ಲಿ, ಸೌಂದರ್ಯದಲ್ಲಿ,
ಪಾಂಡಿತ್ಯದಲ್ಲಿ, ಯೌವ್ವನದಲ್ಲಿ, ಸಂಪತ್ತಿನಲ್ಲಿ,
ಬಲದಲ್ಲಿ ನಿನಗೆ ನೀನೇ ಸರಿಸಮಾನ.

ಪುರುಷರಲ್ಲಿ ಸಿಂಹನೆ, ಉಚಿತವಾದ ಸಮಯ ಬಂದಾಗ, ಒಳ್ಳೆಯ ಕುಟುಂಬದ, ರಾಜಮನೆತನದ, ವಿವೇಚನೆಯುಳ್ಳ, ಮದುವೆಯ ವಯಸ್ಸಿನ ಕನ್ಯೆಯು ನಿನ್ನನ್ನಲ್ಲದೆ ಬೇರೆ ಯಾರನ್ನು ತಾನೆ ತನ್ನ ಪತಿಯಾಗಿ ಆಯ್ಕೆ ಮಾಡಿಕೊಳ್ಳುವಳು?

ಸಿಂಹದ ಬೇಟೆಯನ್ನು ಮುಟ್ಟಲು ಶಿಶುಪಾಲನನ್ನು ಬಿಡಬೇಡ.

ನಿನ್ನ ಸರಿಸಾಟಿಯಿಲ್ಲದ ಸೌಂದರ್ಯ ಮತ್ತು ಅದ್ಭುತವಾದ ಗುಣಗಳನ್ನು ಕೇಳಿದ ನಂತರ, ನನ್ನೀ ಲಜ್ಜೆಯಿಲ್ಲದ ಮನಸ್ಸನ್ನು ನಿನ್ನ ಮೇಲೆ ನೆಟ್ಟಿರುವೆ ಮತ್ತು ನಿನ್ನನ್ನೇ ನನ್ನ ಪತಿಯಾಗಿ ಸ್ವೀಕರಿಸಿರುವೆ, ಓ ಕೃಷ್ಣ.

**ವಿದರ್ಭ** **ರುಕ್ಮಿಣಿ**



**ಭಾಗವತ ಪುರಾಣ 10:52:38**

********************

No.of.words = 234